ಹಳಿಯಾಳದಲ್ಲಿ ಕುಸ್ತಿ ಆಖಾಡವನ್ನು ನಿರ್ಮಿಸುವುದು.

1112. ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಕುಸ್ತಿ ಆಖಾಡವನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಇದೆಯೆ;
ಆ) ಇದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು ಹಾಗೂ ಅದಕ್ಕೆ ಮಂಜೂರಾತಿ ನೀಡಲಾಗಿದೆಯೇ?
ಇ) ಕುಸ್ತಿ ಆಖಾಡದ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

ಅ) ಪ್ರಸ್ತಾವನೆ ಇದೆ
ಆ) ಅಂದಾಜು ವೆಚ್ಚ ರೂ.18,72,500–00 ಗಳು ಕೇಂದ್ರ ಸರ್ಕಾರದ ಧನ ಸಹಾಯ ದೊರೆತ ನಂತರ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು.
ಇ) ಕುಸ್ತಿ ಆಖಾಡದ ನಿರ್ಮಾಣ ಕಾರ್ಯವನ್ನು ಕೇಂದ್ರ ಸರ್ಕಾರದ ಧನ ಸಹಾಯ ದೊರೆತ ನಂತರ ಮತ್ತು ಉಳಿದ ಹಣವನ್ನು ಸಾರ್ವಜನಿಕ ಮಂತಿಕೆಯ ಮೂಲಕ ಸಂಗ್ರಹಿಸಿದ ನಂತರ ಪ್ರಾರಂಭಿಸಲಾಗುವುದು.

ತ್ಯಾಮಗೊಂಡ್ಲು ಹತ್ತಿರ ಮೋರಿ ನಿರ್ಮಾಣ.

981. ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಹೋಬಳಿ ಕಳಲುಘಟ್ಟ ಹತ್ತಿರ ಮೋರಿ ಶಿಥಿಲವಾಗಿದ್ದು ವಾಹನಗಳು ಮತ್ತು ಜನರು ಓಡಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;
ಆ) ಬಂದಿದ್ದಲ್ಲಿ, ಸೇತುವೆಯನ್ನು ಹೊಸದಾಗಿ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಬಂದಿದೆ.
ಆ) ಈ ಸೇತುವೆ ನಿರ್ಮಾಣಕ್ಕಾಗಿ 14.00 ಲಕ್ಷ ರೂ.ಗಳನ್ನು 1992–93 ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಪರಿಶೀಲಿಸಲಾಗುತ್ತಿದೆ.

ಕೊರಟಗೆರೆ ತಾಲ್ಲೂಕು ಹೂಲೀಕುಂಟೆ ಬಳಿ ನದಿಗೆ ಅಡ್ಡವಾಗಿ ಸೇತುವೆ

980. ಶ್ರೀ ಕೆ.ಸಿ. ವೀರಭದ್ರಯ್ಯ (ಕೊರಟಗೆರೆ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕೊರಟಗೆರೆಯಿಂದ ಗೌರಿಬಿದನೂರಿಗೆ ಹೋಗುವ ರಸ್ತೆಯಲ್ಲಿ ಸುವರ್ಣಮುಖಿ ನದಿಗೆ ಕಟ್ಟಿರುವ ಸೇತುವೆ ನದಿಯ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗಿದ್ದು ಸಾರ್ವಜನಿಕರು ಮತ್ತು ವಾಹನಕ್ಕೆ ಓಡಾಡಲು ಅಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;